**ಚಾಸಾ-10 ಪ್ರಾಸಾ-3**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ.20149/2017**

| | |
|---|---|
| **ಸಾಕ್ಷಿದಾರರ ಹೆಸರು** | ಕಾರ್ತಿಕ್. |
| **ತಂದೆಯ ಹೆಸರು** | ಕಣ್ಣನ್, |
| **ವಯಸ್ಸು** | 41 ವರ್ಷ |
| **ಉದ್ಯೋಗ** | ವಿಜ್ಞಾನಿ, ಫಾರ್ಮಸಿಸಿ. |
| **ವಾಸ** | ಹೊಸೂರು ರೋಡ್, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 29.01.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಚಾಸಾ-1 ರಿಂದ 9 ಮತ್ತು ಚಾಸಾ-11 ರಿಂದ 54 ರವರು ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಪೊಲೀಸರು ನನ್ನನ್ನು ಈ ಪ್ರಕರಣದ ಸಂಬಂಧ ಯಾವುದೇ ವಿಚಾರಣೆ ಮಾಡಿಲ್ಲ ಮತ್ತು ನಾನು ಅವರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ಅಲ್ಲೆ ಗಳೆದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಹಿ.ಸ.ಸ.ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಹಿ. ಸ. ಸ ಅಭಿಯೋಜಕರವರಿಂದ :**

ನಾನು ಮತ್ತು ನನ್ನ ಹೆಂಡತಿ ಚಾರಣ್ಯ ರವರು ಟ್ರೂ ಸೀಸನ್ ಎಂಬ ಕಂಪನಿಯ ಹಾಲಿಡೇ ಪ್ಯಾಕೇಜ್ ನ ಜಾಹೀರಾತನ್ನು ನೋಡಿದ್ದು, ಸದರಿ ಜಾಹೀರಾತಿನಲ್ಲಿ ಜಾಹೀರಾತಿನಲ್ಲಿ ಸಾರ್ವಜನಿಕರಿಗೆ ಭಾರತದದ್ಯಾಂತ ಇರುವ ಯಾತ್ರಿಕಾ ಮತ್ತು ಪ್ರೇಕ್ಷಣಿಯಾ ಹಾಗೂ ಧಾರ್ಮಿಕ ಸ್ಥಳಗಳನ್ನು ತೋರಿಸಲು ಜಾಹೀರಾತು ಪ್ರಕಟವಾಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ನಾನು ಸದರಿ ಕಂಪನಿಯ ಸದಸ್ಯತ್ವವನ್ನು ಪಡೆದುಕೊಂಡು, ಸದರಿ ಕಂಪನಿ ಯಿಂದ ಕರಾರು ಒಪ್ಪಂದ ಮಾಡಿಕೊಂಡು 2 ರಿಂದ 6 ರಾತ್ರಿಗಳು ವಿವಿಧ

**ಚಾಸಾ-10 ಪ್ರಾಸಾ-3**

ವ್ಯವಸ್ಥೆ ಕಲ್ಪಿಸುವುದಾಗಿ ಕಂಪನಿಯವರು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ರೂ.6,000/- ದಿಂದ ರೂ.35,000/-ಗಳ ವರೆಗೆ ಶುಲ್ಕ ವಿಧಿಸುವುದಾಗಿ ಮಾಹಿತಿ ಇತ್ತು ಎಂದರೆ ಸರಿಯಲ್ಲ. ನಾನು ದಿ.04.01.2015 ರಂದು ಟ್ರೂ ಸೀಸನ್ ಕಂಪನಿಯ ಮಾಲೀಕರಾದ ಆರೋಪಿ ಶಿವಣ್ಣ ರವರನ್ನು ಅವರ ಕಛೇರಿಯಲ್ಲಿ ಭೇಟಿಯಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಮಾರು 3 ವರ್ಷಗಳ ಕಾಲ ಅವರಿಂದ ಸದಸ್ಯತ್ವವನ್ನು ಪಡೆದುಕೊಂಡು ಮೂರು ರಾತ್ರಿ ಮತ್ತು ನಾಲ್ಕು ಹಗಲು ಅವಧಿಗೆ ಹಾಲೀಡೇ ಪ್ಯಾಕೇಜ್ ಗೆ ರೂ.20,000/-ಗಳನ್ನು ಪಾವತಿ ಮಾಡಿದೆ ಎಂದರೆ ಸರಿಯಲ್ಲ. ಮೇ 2015 ರಂದು ಸದರಿ ಕಂಪನಿಯನ್ನು ಮುಚ್ಚಿದ್ದು ನನ್ನಿಂದ ಹಣ ಪಡೆದು ಹಾಲೀಡೇ ಪ್ಯಾಕೇಜ್ ಸೌಲಭ್ಯವನ್ನು ನೀಡದೇ ನನಗೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನಂತೆಯೇ ಸದರಿ ಟ್ರೂ ಸೀಸನ್ ಕಂಪನಿಗೆ ಹಣವನ್ನು ಪಾವತಿ ಮಾಡಿ ಸೌಲಭ್ಯವನ್ನು ಪಡೆಯದೇ ಇರುವವರು ಸುಮಾರು ಜನರು ಇರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂಧ ಚಾಸಾ-1 ರವರು ವಿವೇಕ್ ನಗರ ಪೊಲೀಸ್ ಠಾಣೆಗೆ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಗೊತ್ತಿದ್ದರು ಮತ್ತು ಪೊಲೀಸರಿಗೆ ನಿಪಿ.8ರಂತೆ ಹೇಳಿಕೆಯನ್ನು ನೀಡಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ. ಆರೋಪಿ ಪರ ವಕೀಲರು ಗೈರು ಹಾಜರಿದ್ದು ಆರೋಪಿಯು ಸ್ವತಃ ಪಾಟೀಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**